205 : (23) ಶ್ರೀ ಜಯಪ್ರಕಾಶ್ ಹೆಗ್ಡೆ.ಕೆ.

ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಉಡುಪಿ ಜಿಲ್ಲೆಯಲ್ಲಿ ಖಾಸಗಿಯಾಗಿ ಬೆಳೆಯುತ್ತಿರುವ ತೋಟಗಾರಿಕೆ ಬೆಳೆಗಳ ಹಾಗೂ ಸರ್ಕಾರಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಎಷ್ಟು;

ಆ. ಸರ್ಕಾರಿ ತೋಟಗಾರಿಕಾ ಫಾರಂಗಳ ಅಭಿವೃದ್ಧಿ ಕೈಗೊಂಡಿರುವ ಕ್ರಮಗಳೇನು;

ಇ. ಖಾಸಗಿ ತೋಟಗಾರಿಕಾ ಬೆಳೆಗಾರರಿಗೆ ನೀಡಿರುವ ಸವಲತ್ತುಗಳೇನು;

ಈ. ಸರ್ಕಾರಿ ತೋಟಗಾರಿಕಾ ಫಾರಂಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಶಶಿಕಾಂತ ಅ. ನಾಯಿಕ

ಅ. ಉಡುಪಿ ಜಿಲ್ಲೆಯಲ್ಲಿ ರೈತರು ಬೆಳೆಯುತ್ತಿರುವ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಅಂದಾಜು 48.400 ಹೆಕ್ಟೇರ್ ಗಳು ಹಾಗೂ ಸರ್ಕಾರಿ ತೋಟಗಾರಿಕೆ ಕ್ಷೇತ್ರಗಳಲ್ಲಿ ಬೆಳೆಯುತ್ತಿರುವ ಬೆಳೆಗಳ ವಿಸ್ತೀರ್ಣ 114 ಹೆಕ್ಟೇರ್ ಗಳು.

ಆ. ಸರ್ಕಾರಿ ತೋಟಗಾರಿಕೆ ಕ್ಷೇತ್ರಗಳಲ್ಲಿ ಈ ಕೆಳಕಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿದೆ.

1) ಸಣ್ಣ ನರ್ಸರಿಗಳ ಅಭಿವೃದ್ಧಿ ಮೂಲಕ ಮಲ್ಲಿಗೆ, ಕಾಳುಮೆಣಸು ಹಾಗೂ ಗೋಡಂಬಿ ಗಿಡಗಳ ಸಸ್ಯಾಭಿವೃದ್ಧಿ,

2) ಕೃಷಿ ಹೊಂಡಗಳನ್ನು ನಿರ್ಮಿಸುವ ಮೂಲಕ ಅಂತರ್ಜಲ ಹೆಚ್ಚಿಸುವುದು,

3) ಜೇನು ಸಾಕಾಣಿಕೆ ಘಟಕಗಳನ್ನು ಅಭಿವೃದ್ಧಿ ಪಡಿಸಿ ಪರಾಗಸ್ಪರ್ಶ ಕ್ರಮವನ್ನು ಹೆಚ್ಚಿಸುವುದು,

4) ಮುಂಚೂಣಿ ಪ್ರಾತ್ಯಾಕ್ಷತೆಗಳ ಮೂಲಕ ಹೊಸತಳಿಗಳನ್ನು ಪರಿಚಯಿಸುವುದು,

5) ಕ್ಷೇತ್ರಗಳಲ್ಲಿ ಹಸಿರೆಲೆಗೊಬ್ಬರ ಹಾಗೂ ಎರೆಹುಳು ಗೊಬ್ಬರಗಳನ್ನು ತಯಾರಿಸಿ, ಕ್ಷೇತ್ರಗಳನ್ನು ಸಾವಯವ ತೋಟಗಾರಿಕೆಗೆ ಪರಿವರ್ತಿಸುವುದು.

ಇ) ರೈತರಿಗೆ ಈ ಕೆಳಕಂಡ ಸವಲತ್ತುಗಳನ್ನು ಒದಗಿಸಲಾಗುತ್ತಿದೆ:

1) ಉತ್ಕೃಷ್ಟ ಗುಣಮಟ್ಟದ ಕೋಕೊ, ಗೇರು, ತೆಂಗು, ಮಲ್ಲಿಗೆ, ಕಾಳುಮೆಣಸುಗಳ ಕಸಿ/ಕಸಿ ವಿತರಣೆ.

2) ತೋಟಗಾರಿಕೆ ಬೆಳೆಗೆ ಬೀಳುವ ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಶೇ.50 ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣೆ ಔಷಧಿ/ ಪರಿಕರಗಳ ವಿತರಣೆ.

3) ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ಶೇ.75 ರ ಸಹಾಯಧನ.

4) ಕೃಷಿ ಹೊಂಡಗಳನ್ನು ನಿರ್ಮಿಸಲು ರೂ.25,000/–ಗಳ ಸಹಾಯಧನ.

5) ಸಾವಯವ ಕೃಷಿಪರಿವರ್ತನೆಗೆ ರೈತರಿಗೆ ಎಕರೆಗೆ ರೂ.4,000– ದಂತೆ ಪ್ರೋತ್ಸಾಹಧನ ಹಾಗೂ ಎರೆಹುಳು ಘಟಕ ನಿರ್ಮಿಸಲು ಶೇ.50ರ ಸಹಾಯಧನಗಳನ್ನು ನೀಡಲಾಗುತ್ತಿದೆ.

ಈ) ಹೌದು.